

ನೀಡಿದೆ. ಸಮಾನ ಮನಸ್ಕರು, ಸಮಾನ ಸ್ಥಾನಮಾನದ ಜನರು ಮೀಟಿಂಗ್ ಮುಗಿಸಿ ತಮ್ಮ ತಮ್ಮ ಊರುಗಳಿಗೆ ಮರಳಲು ಆ ಸರಕಾರಿ ಕಚೇರಿ ವಿಮಾನದ ಟಿಕೆಟ್ಟುಗಳನ್ನೂ ಕಾದಿರಿಸಿತ್ತು. 'ಸ' ಮುಂದಾಗಿ 'ಅ' ಳ ಟಿಕೆಟ್ಟನ್ನು ತೆಗೆದುಕೊಂಡು ಹೊರಬರುತ್ತ ತನ್ನ ಗಾಡಿಯಲ್ಲಿ ಹೋಗಿ ಕೂರಲು 'ಅ'ಳಿಗೆ ಆದೇಶಿಸಿದ.

'ಸಾಮಾನುಗಳೆಲ್ಲಿ?'

'ಹೋಟೆಲಿನಲ್ಲಿ'

ಚಾಲಕನಿಗೆ ಮೊದಲು ಹೋಟೆಲ್ಲು ಆನಂತರ ಮನೆಗೆ ಹೋಗಲು ಸೂಚಿಸಿದ 'ಸ'. 'ಅ' ಅವನನ್ನು ತಡೆಯಲಿಲ್ಲ. ಸ್ವಗತವೆಂಬಂತೆ ಹೇಳಿಕೊಂಡಳು– 'ವಿಮಾನ ಹೊರಡಲು ಇನ್ನೇನು ಎರಡೇ ತಾಸಿರುವುದು. ಹೋಟೆಲ್‌ಗೆ ಹೋಗಿ ಮತ್ತೆ ಏರ್‌ಪೋರ್ಟ್ ತಲುಪುವುದು ಕಷ್ಟ'.

'ವಿಮಾನ ನಾಳೆಯೂ ಹೊರಡುತ್ತದೆ, ನಾಡಿದ್ದೂ ಹೊರಡುತ್ತೆ, ದಿನಾ ಹೋಗುತ್ತೇ – 'ಸ' ಇಷ್ಟನ್ನೇ ಹೇಳಿದ. ರಸ್ತೆಯುದ್ದಕ್ಕೂ ಇನ್ನೇನನ್ನೂ ನುಡಿಯಲಿಲ್ಲ. ಹೋಟೆಲ್ ತಲುಪಿ ಅವಳ ಸೂಟ್‌ಕೇಸನ್ನು ಗಾಡಿಯಲ್ಲಿಡುವಾಗ ಅವಳು ಮತ್ತೆ ಹೇಳಿದಳು...'ಸಮಯ ಬಹಳ ಕಮ್ಮಿಯಿದೆ, ಫ್ಲೈಟ್ ಮಿಸ್ ಆಗುತ್ತೆ: ಉತ್ತರವೆಂಬಂತೆ ಅವನೆಂದ – 'ಮನೆಯಲ್ಲಿ ತಾಯಿ ದಾರಿ ಕಾಯುತ್ತಿರಬಹುದು'.

ಅವಳು ಮೂಕಳಾಗಿ ಯೋಚಿಸುತ್ತಲೇ ಕುಳಿತಳು- ಬಹುಶಃ ಅವನು ತನ್ನ ತಾಯಿಗೆ ಇಂದಿನ ಮೀಟಿಂಗ್ ಮತ್ತು ತಾನು ಬರುವ ವಿಷಯ ಮುಂದಾಗಿಯೇ ತಿಳಿಸಿದ್ದಾನೆ. ಯಾಕೆ ತಿಳಿಸಿದ? ಅರ್ಥವಾಗಲಿಲ್ಲ ಅವಳಿಗೆ.

ಅವಳು ಬಹಳಷ್ಟು ಸಲ 'ಯಾಕೆ' ಎಂದು ಪ್ರಶ್ನೆ ಹಾಕಿಕೊಳ್ಳುತ್ತಾಳಾದರೂ ಉತ್ತರಕ್ಕಾಗಿ ಕಾಯುವುದಿಲ್ಲ. ಅವಳಿಗೆ ಗೊತ್ತು, ಹೆಕ್ಕಿದರೂ ಒಡಲಾಳದಿಂದ ಯಾವ